(ಇಂದು ದಿನಾಂಕ 06-11-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ವಿ.ಬಿ. ವಕೀಲರಿಂದಃ**

ನಾನು ಮ್ಯಾನೇಜರ್ ಆಗಿ ಆರೋಪಿಗೆ ರೂ. 6,15,000-00 ಸಾಲ ಕೊಟ್ಟಿಲ್ಲ ಎಂದರೆ ಸರಿ. ಆ ಸಮಯದಲ್ಲಿ ಇದ್ದಂತಹ ಮ್ಯಾನೇಜರ್ ಇವರು ಆರೋಪಿಗೆ ಯಾವ ರೀತಿಯಾಗಿ ಸಾಲ ಮಂಜೂರು ಮಾಡಿದ್ದರು ಎಂದರೆ ಸಾಕ್ಷಿ ಸ್ವ-ಸಹಾಯ ಸಂಘದ ಅಡಿಯಲ್ಲಿ ಮಂಜೂರು ಮಾಡಿದ್ದರು ಎಂದು ಹೇಳುತ್ತಾರೆ. ಆರೋಪಿಗೆ ರೂ. 6,15,000-00 ಗಳನ್ನು ಸಾಲವಾಗಿ ನಗದು ರೂಪದಲ್ಲಿ ಕೊಟ್ಟಿದ್ದೇವೆ. ನಗದುರೂಪದಲ್ಲಿ ಕೊಟ್ಟಿದ್ದೇವೆ ಎಂದು ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಸಂಘಕ್ಕೆ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಸಂಘಕ್ಕೆ ರೂ. 6,15,000-00 ಗಳನ್ನು ಕೊಟ್ಟಿದ್ದೇವೆ ಎಂದು ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಹೇಳಿಲ್ಲ ಅನ್ನುವುದು ಸರಿಯಲ್ಲ. ನಿ.ಪಿ.1 ರ ಪ್ರಕಾರ ರೂ. 3,84,000-00 ಗಳಿಗೆ ಇದೆ ಎಂದರೆ ಸರಿ. ರೂ. 6,15,000-00 ಸಾಲ ಅಂತಾ ಹೇಳಿದ್ದು ರೂ. 3,84,000-00 ಗಳಿಗೆ ಮಾತ್ರ ಯಾಕೆ ಹಾಕಿದ್ದೀರಿ ಎಂದರೆ ಸಾಕ್ಷಿ ಅಷ್ಟಕ್ಕೆ ಚೆಕ್ಕನ್ನು ಕೊಟ್ಟಿದ್ದರು ಎಂದು ಹೇಳುತ್ತಾರೆ. ಆರೋಪಿಯ ವಿರುದ್ಧ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಸಿ.ಸಿ.. ನಂ. 1713/2024 ರಂತೆ ರೂ. 3,84,000-00 ಇನ್ನೊಂದು ಪ್ರಕರಣ ದಾಖಿಸಿದ್ದೇವೆ ಎಂದರೆ ಸರಿ. ದಿನಾಂಕ 24-10-2024 ರಂದು ರೂ. 3,84,000-00 ಹಣವನ್ನು ಆರೋಪಿ ನಮ್ಮ ಸಂಘಕ್ಕೆ ಕಟ್ಟಬೇಕು ಎಂದು ಆದೇಶ ಆಗಿದೆ ಎಂದರೆ ಸರಿ. ಸಂಘದಲ್ಲಿ ಇದ್ದಂತಹ 15 ಜನರು ಸೇರಿ ರೂ. 9,17,000-00 ಗಳನ್ನು ನಮ್ಮ ಸಂಘಕ್ಕೆ ಕಟ್ಟಿದ್ದಾರೆ. ಈಗ ಪ್ರಸ್ತುತ ರೂ. 8,20,000-00 ಸಾಲ ಬಾಕಿ ಇದೆ. ಆರೋಪಿ ರೂ. 40,000-00 ಗಳನ್ನು ನಮ್ಮ ಸೊಸೈಟಿಗೆ ಕಟ್ಟಿದ್ದು ಆ ಸಂದರ್ಭದಲ್ಲಿ ತಲಾ 40,000-00 ಹಣ ಕಟ್ಟಿದರೆ ಸಾಲದ ಖಾತೆಯನ್ನು ರದ್ದುಗೊಳಿಸುತ್ತೇವೆ ಎಂದು ನಾವು ಹೇಳಿದ್ದೇವೆ ಎಂದರೆ ಸಾಕ್ಷಿ ಎಲ್ಲರೂ ಕಟ್ಟಿದರೆ ಮಾತ್ರ ಖಾತೆಯನ್ನು ರದ್ದು ಮಾಡುತ್ತೇವೆ ಎಂದು ಹೇಳಿದ್ದೇವೆ ಎಂದು ಹೇಳುತ್ತಾರೆ. ಇಬ್ಬರು ಸದಸ್ಯರು ತಲಾ ರೂ. 40,000-00 ಹಣವನ್ನು ಕಟ್ಟಿದರೆ ಸಾಲ ಸಂಪೂರ್ಣ ಖಾತೆ ರದ್ದಾಗುತ್ತದೆ ಎಂದರೆ ಸಾಕ್ಷಿ ಇನ್ನೂ ಬಡ್ಡಿ ಕಟ್ಟಬೇಕಾಗುತ್ತದೆ ಎಂದು ಹೇಳುತ್ತಾರೆ. ಸದರಿ ಇಬ್ಬರಲ್ಲಿ ಮಂಜುಳಾ ಎನ್ನುವವಳು ನಮ್ಮ ಸಂಘದಲ್ಲಿ ಕಟ್ಟುತ್ತಿದ್ದಾರೆ ಎಂದರೆ ಸರಿ. ಸದರಿ ಮಂಜುಳಾ ಇವರು ಇಲ್ಲಿಯವರೆಗೂ ರೂ.

7,400-00 ಹಣವನ್ನು ಕಟ್ಟಿದ್ದಾರೆ. ಅದನ್ನು ಸಾಲಕ್ಕೆ ಜಮಾ ಮಾಡಿಕೊಂಡಿದ್ದೇವೆ. ಅದೇ ರೀತಿ ಅಮಲ್ಜಾರಿ ಕೇಸನ್ನೂ ಸಹ ಇದೇ ನ್ಯಾಯಾಲಯದಲ್ಲಿ ದಾಖಲಿಸಿದ್ದೇವೆ ಎಂದರೆ ಸರಿ. ಸಂಘದಲ್ಲಿ ಇದ್ದಂತಹ 15 ಜನರ ವಿರುದ್ಧ ಹಣ ವಸೂಲಾತಿಗಾಗಿ ಸಿವಿಲ್ ದಾವೆಯನ್ನು ಹಾಕಬಹುದಿತ್ತು ಎಂದರೆ ಸಾಕ್ಷಿ ಹಾಕಿಲ್ಲ ಎಂದು ಹೇಳುತ್ತಾರೆ. ರೂ. 6,15,000-00 ಕ್ಕೆ ನಾವು ನ್ಯಾಯಾಲಯ ಶುಲ್ಕ ಕಟ್ಟಬೇಕಾಗುತ್ತದೆ ಎಂಬ ಉದ್ದೇಶದಿಂದ ದಾವೆಯನ್ನು ಹಾಕಿಲ್ಲ ಅನ್ನುವುದು ಸರಿಯಲ್ಲ. ಈ ಪ್ರಕರಣ ದಾಖಲಿಸುವ ಮುಂಚೆ ನಾವು ಕೊಟ್ಟಂತಹ ನೋಟಿಸ್ ಕಾನೂನುಬದ್ಧವಾಗಿಲ್ಲ ಅನ್ನುವುದು ಸರಿಯಲ್ಲ. ಆರೋಪಿ ಮರುಪಾವತಿಸಿದಂತಹ ವಿವರಣೆಯ ದಾಖಲಾತಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಅನ್ನುವುದು ಸರಿಯಲ್ಲ. ಆರೋಪಿ ಹಣವನ್ನು ಕಟ್ಟಿದ್ದರೂ ಸಹ ಚೆಕ್ಕನ್ನು ದುರುಪಯೋಗಪಡಿಸಿಕೊಂಡಿದ್ದೇವೆ ಅನ್ನುವುದು ಸರಿಯಲ್ಲ. ಈ ಕೇಸಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಎಲ್ಲಾ ಹಣವನ್ನು ಕಟ್ಟಿದ್ದರೂ ಸಹ ಆರೋಪಿತನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಅನ್ನುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾದಂ. ಕಾರವಾರ